



# ಅಬ್ಬಾ.. ಕಲ್ಲಂಗಡಿ!

ಪ್ರತಿ ವರ್ಷವೂ ಅಮೆರಿಕಾದಲ್ಲಿರುವ ಹೋಪ್‌ಟೌನ್‌ನಲ್ಲಿ ಕಲ್ಲಂಗಡಿ ಉತ್ಸವ ನಡೆಯುತ್ತದೆ. ಹೋಪ್‌ಟೌನ್ ಕೃಷಿಕರದ್ದು ಕಲ್ಲಂಗಡಿ ಬೆಳೆಯುವಲ್ಲಿ ಎತ್ತಿದ ಕೈ. ಹಾಗೆಂದು ಅದು ಸಾಮಾನ್ಯ ಕಲ್ಲಂಗಡಿಯಲ್ಲ. ಭಾರೀ ಗಾತ್ರದ್ದು!

ಹೋಪ್‌ಟೌನ್‌ನ ಲಾಯ್ಡ್ ಬ್ರೈಟ್‌ನ ಮನೆಯವರೆಲ್ಲ ದೊಡ್ಡ ಕಲ್ಲಂಗಡಿಯನ್ನು ಬೆಳೆದು ದಾಖಲೆ ನಿರ್ಮಿಸುವುದರಲ್ಲೇ ನಿರತರಾಗಿದ್ದಾರೆ. 1985ರಲ್ಲಿ 260 ಪೌಂಡ್ (118.2 ಕೆ.ಜಿ) ತೂಕದ ಕಲ್ಲಂಗಡಿ ಬೆಳೆದರು. 2005 ರಲ್ಲಿ 262.6 ಪೌಂಡ್(119.4ಕೆ.ಜಿ) ಹಾಗೂ ಅದೇ ವರ್ಷ ಬರೋಬ್ಬರಿ 268.8 ಪೌಂಡ್ ಅಂದರೆ 122.2 ಕೆ.ಜಿ ತೂಕದ ಕಲ್ಲಂಗಡಿ ಬೆಳೆದು ಗಿನ್ನಿಸ್ ವರ್ಲ್ಡ್ ರೆಕಾರ್ಡ್‌ನಲ್ಲಿಯೂ ಇವರು ದಾಖಲೆ ಬರೆದಿದ್ದಾರೆ! ಈ ವರ್ಷವೂ ಕೂಡಾ ಭಾರೀ ಗಾತ್ರದ ಕಲ್ಲಂಗಡಿ ಬೆಳೆದಿದ್ದರೂ ಅದು ಹಳೆಯ ದಾಖಲೆಯನ್ನು ಸರಿಗಟ್ಟಿಲ್ಲವಂತೆ.

ಕಲ್ಲಂಗಡಿ ಬೆಳೆಯೋದರಲ್ಲಿ ಹೋಪ್‌ಟೌನ್‌ನ ರೈತರ ಸ್ಪರ್ಧೆ ಸಾಧ್ಯವಿಲ್ಲ ಬಿಡಿ.. ಎಂದು ಅಕ್ಕಪಕ್ಕದ ಹಳ್ಳಿಯವರೆಲ್ಲ ಕೈಚೆಲ್ಲಿದ್ದಾರಂತೆ.

■ ವಿದ್ಯಾ ಹಾಲಭಾವಿ